**ಸಾಕ್ಷಿಯನ್ನು ದಿಃ 09.12.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ.ಕೆ.ಪಿ. ವಕೀಲರಿಂದಃ**

ಸದರಿ ಅಪಘಾತದ ದಿನ ನಾನು ನನ್ನ ಕೆಲಸ ಮುಗಿಸಿಕೊಂಡು ನನ್ನ ಮನೆಯ ಕಡೆಗೆ ಹೋಗುತಿದ್ದೆ. ಸದರಿ ಅಪಘಾತದ ಸಮಯದಲ್ಲಿ ನಾನು ಪ್ರಥಮ ವರ್ಷದ ಬಿ.ಎ. ಪದವಿ ವ್ಯಾಸಂಗ ಮಾಡುತಿದ್ದೆ. ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ನನ್ನ ತಂದೆ ಪಿರ್ಯಾದಿಯನ್ನು ನೀಡಿರುತ್ತಾರೆ. ಸದರಿ ಬಿ.ಎ. ಕಾಲೇಜಿಗೆ ಸೇರುವ ಪೂರ್ವದಲ್ಲಿ ಮೊದಲು ನಾನು ಬಿ.ಕಾಂ. ಮಾಡುತಿದ್ದೆ. ನಾನು ಅಪಘಾತದ ಸಮಯದಲ್ಲಿ ಚಲಾಯಿಸುತಿದ್ದ ಮೋಟಾರ್ ಸೈಕಲ್ ನ ಮಾಲೀಕರು ನನ್ನ ತಂದೆ. ಸದರಿ ಅಪಘಾತದ ಸಮಯದಲ್ಲಿ ನನ್ನ ಬಳಿ ಎಲ್.ಎಲ್. ಇತ್ತು ಮತ್ತು ಡಿ.ಎಲ್. ಗೆ ಅರ್ಜಿಯನ್ನು ಸಲ್ಲಿಸಿದ್ದೆ. ಈಗ ನನ್ನ ಬಳಿ ಡಿ.ಎಲ್. ಇದೆ. ಸದರಿ ಎಲ್.ಎಲ್. ಪ್ರತಿ ಈಗ ನನ್ನ ಬಳಿ ಇಲ್ಲ. ಸದರಿ ಎಲ್.ಎಲ್. ಪ್ರತಿಯನ್ನು ಆರ್.ಟಿ.ಓ ಕಛೇರಿಯಲ್ಲಿ ಅರ್ಜಿ ಸಲ್ಲಿಸಿ ಹಾಜರುಪಡಿಸಲು ತೊಂದರೆ ಇಲ್ಲ. ಸದರಿ ಅಪಘಾತದ ಸಮಯದಲ್ಲಿ ನಾನು ಒಬ್ಬನೆ ಸದರಿ ಮೋಟಾರ್ ಸೈಕಲ್ ಅನ್ನು ಚಾಲನೆ ಮಾಡಿರುತ್ತೇನೆ.

ಸದರಿ ಅಪಘಾತವಾದ ನಂತರ ನವ ಚೈತನ್ಯ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ಸದರಿ ಅಪಘಾತದ ಪರಿಣಾಮ ನನ್ನ ಕಾಲು ಮುರಿದಿರುತ್ತದೆ ಮತ್ತು ಕಾರಿನಲ್ಲಿ ಇದ್ದ ಒಬ್ಬ ವ್ಯಕ್ತಿ ನನ್ನ ಪಕ್ಕದ ಬೆಡ್ ನಲ್ಲಿ ಚಿಕಿತ್ಸೆಗೆ ದಾಖಲಾಗಿದ್ದರು. ನಾನು ದಿ.03.08.2023 ರಿಂದ 07.08.2023 ವರೆಗೆ ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡು ನಂತರ ಬಿಡುಗಡೆಯಾಗಿ follow-up ಚಿಕಿತ್ಸೆಯನ್ನು ಪಡೆಯುತಿದ್ದೇನೆ. ಸದರಿ ಆಸ್ಪತ್ರೆಯ ವೈದ್ಯಕೀಯ ಖರ್ಚು-ವೆಚ್ಚವನ್ನು ಯಾರು ಭರಿಸಿರುತ್ತಾರೆ ಎಂದರೆ ನನ್ನ ತಂದೆಯವರನ್ನು ಕೇಳಬೇಕು. ಸದರಿ ನಿಪಿ.9 ವೈದ್ಯಕೀಯ ಬಿಲ್ಲುಗಳನ್ನು ಹೆಚ್ಚಿನ ಹಣ ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿಸಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿರುವಾಗ ಪೊಲೀಸರಿಗೆ ಸದರಿ ಅಪಘಾತದ ಬಗ್ಗೆ ಮಾಹಿತಿಯನ್ನು ನೀಡಿರುತ್ತೇನೆ. ಸದರಿ ಅಪಘಾತವನ್ನು ನನ್ನ ತಂದೆ ಪ್ರತ್ಯಕ್ಷದರ್ಶಿಯಾಗಿ ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರ 5 ರಲ್ಲಿ ಕಾಣಿಸಿರುವಂತೆ ವೈದ್ಯಕೀಯ ಖರ್ಚಿಗೆ ಮತ್ತು transportation ಖರ್ಚಿಗೆ ಆ ರೀತಿ ಹಣವನ್ನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ವೃತ್ತಿ ಮತ್ತು ಆದಾಯಕ್ಕೆ ಸಂಬಂಧಿಸಿದಂತೆ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು swiggy delivery boy ಆಗಿ ಕಲಸ ಮಾಡಿಕೊಂಡು ತಿಂಗಳಿಗೆ ರೂ.20,000/- ದುಡಿಯುತಿದ್ದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಅಪಘಾತದ ಪರಿಣಾಮ ನನ್ನ ವಿಧ್ಯಾಭ್ಯಾಸಕ್ಕೆ ಅಡಚಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪ್ಯಾರ 7 ರಲ್ಲಿ ಕಾಣಿಸಿರುವ ಯಾವುದೇ ತೊಂದರೆ ಅಥವ ನೋವುಗಳ ನನಗೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮುಂದುವರೆದ ಚಿಕಿತ್ಸೆಗೆ ನನಗೆ ರೂ.70,000/- ರಿಂದ 80,000/- ಬೇಕಾಗಿದೆ ಎಂದು ಕೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಹೆಚ್ಚಿನ ವಿಮೆ ಪರಿಹಾರ

ಹಣ ಪಡೆಯುವ ಸಲುವಾಗಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** 2 ನೇ ಎದುರುದಾರರ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ, ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲ್ಪಟ್ಟಿದೆ)

(ಓ.ಹೆ.ಕೆ.ಸ.ಇ.)

IX ಹಿರಿಯ ಹೆಚ್ಚುವರಿ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು